ಬೈಕಾರ್ಬೀನೇಟ್			
17:17:17	20,426	29,494	10,128
ಲಾಭ (ರೂ. ಕೋಟಿಗಳಲ್ಲಿ)			
(ತೆರಿಗೆಗೆ ಮುನ್ನ)			
	34.84	40.15	ತಪಾಸಣೆಯಲ್ಲಿದೆ.

ಸಮುದ್ರ ಕೊರತಕ್ಕೆ ತಡೆಗೊಡೆ ನಿರ್ಮಾಣದಲ್ಲಿ ಬಳಸುವ ಮರಳು ಚೀಲಗಳ ಮೌಲ್ಯ

603(991) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಮುದ್ರ ಕೊರತಕ್ಕೆ ತಡೆಗೋಡೆ ನಿರ್ಮಿಸುವಾಗ ಬಳಸುವ ಒಂದು ಚದರ ಗಜ ಮರಳು ಚೀಲಕ್ಕೆ ನಿಗದಿಪಡಿಸಲಾಗಿರುವ ಹಣ ಎಷ್ಟು; ಇದರ ನಿರ್ವಹಣೆ ವೆಚ್ಚ ಎಷ್ಟು;

ಆ) ಇದೇ ಕಾರ್ಯಕ್ಕೆ ಒಂದು ಚದರ ಗಜ ಕಲ್ಲಿಗೆ ಎಷ್ಟು ಹಣವನ್ನು ಕೊಡಲಾಗುತ್ತಿದೆ. ಮರಳು ಹಾಗೂ ಕಲ್ಲಿನ ತಡೆಗೋಡೆ ನಿರ್ಮಾಣದಲ್ಲುಂಟಾಗುವ ವ್ಯತ್ಯಾಸಗಳೇನು; ಈ ಎರಡು ಪ್ರಕಾರಗಳಲ್ಲಿನ ಹಣದ ವ್ಯತ್ಯಾಸ ಎಷ್ಟು;

ಇ) ಬ್ರಹ್ಮಾವರ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸಮುದ್ರ ಕೊರೆತ ಪ್ರದೇಶದಲ್ಲಿ ತಡೆಗೋಡೆ ನಿರ್ಮಿಸಲು ಮರಳು ಚೀಲ ಬಳಸುವ ತೀರ್ಮಾನ ಕೈಗೊಂಡ ಉದ್ದೇಶಗಳೇನು; ಇದರಿಂದ ಉಂಟಾದ ಲಾಭಗಳೇನು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು)

ಅ) ಮರಳು ಚೀಲಗಳಿಗೆ ಘ.ಮೀ. ನಲ್ಲಿಯೇ ಲೆಕ್ಕ ಹಾಕಲಾಗುವುದು ಪ್ರತಿ ಘ.ಮೀ.ಗೆ ಅಂದಾಜು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗೆ ರೂ. 702.00, ಉತ್ತರ ಕನ್ನಡ ಜಿಲ್ಲೆಗೆ ರೂ. 756.50 ಇರುತ್ತದೆ.

ಇದರ ನಿರ್ವಹಣೆಗಾಗಿ ಪ್ರತ್ಯೇಕ ವೆಚ್ಚ ಮಾಡುವುದಿಲ್ಲ.

ಆ) ಕಲ್ಲುಗಳಿಗೆ (ಆರ್ಮರ್ ಸ್ಟೋನ್) ಗಣಿಯಲ್ಲಿ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗೆ ಪ್ರತಿ ಘ.ಮೀ.ಗೆ ರೂ. 530.0.00 ಹಾಗೂ ಉತ್ತರ ಕನ್ನಡ ಜಿಲ್ಲೆಗೆ ಪ್ರತಿ ಘ.ಮೀ.ಗೆ ರೂ. 500.00 ದರ ಇರುತ್ತದೆ. ಇದರಲ್ಲಿ ಸಾಗಾಟ ಹೇರುವುದು ಇಳಿಸುವುದು ಇತ್ಯಾದಿ ದರ ಸೇರಿಲ್ಲ.

ಮರಳು ಚೀಲಗಳ ಹಾಗೂ ಕಲ್ಲಿನ ತಡೆಗೋಡೆಗಳ ಸೆಕ್ಷನ್‌ಗಳು ಭಿನ್ನವಾಗಿರುತ್ತದೆ. ಮರಳು ಚೀಲಗಳಿಗೆ ಎಲ್ಲಾ ಕಡೆ ಒಂದೇ ದರವಿರುತ್ತದೆ. ಕಲ್ಲುಗಳಿಗೆ ಸ್ಥಳದಿಂದ ಕಲ್ಲು ಗಣಿಗಳಿಗೆ ಇರುವ ದೂರದ ಮೇಲೆ ದರ ಅವಲಂಬಿತವಾಗಿರುತ್ತದೆ.

ಇ) ಸಮುದ್ರ ಕೊರತೆ ನಿಯಂತ್ರಣದ ಬಗ್ಗೆ ಸಲಹೆ ನೀಡಲು ಸರ್ಕಾರವು ಒಂದು ತಾಂತ್ರಿಕ ಪರಿಣಿತರ ಸಮಿತಿ ನೇಮಿಸಿದ್ದು, ಈ ಸಮಿತಿಯು ತುರ್ತು ಸಮುದ್ರ ಕೊರತೆ ಪ್ರದೇಶಗಳಲ್ಲಿ ಮರಳು ಚೀಲಗಳನ್ನು ಬಳಸಲು ಸಲಹೆ ನೀಡಿರುತ್ತದೆ. ಇದನ್ನು ಕೆ.ಆರ್.ಸಿ. ಸುರತ್ಕಲ್ ತಜ್ಞರು ಶಿಫಾರಸ್ಸು ಮಾಡಿರುತ್ತಾರೆ. ಇದನ್ನು ಕೇವಲ ಬ್ರಹ್ಮಾವರ ಕ್ಷೇತ್ರ ವ್ಯಾಪ್ತಿಯಲ್ಲಿ ಮಾತ್ರ ಅಳವಡಿಸದೇ ರಾಜ್ಯದ ಕರಾವಳಿಯಲ್ಲಿ ಸಮುದ್ರ ಕೊರತ ಕಂಡು ಬಂದ ಸ್ಥಳಗಳಲ್ಲಿ ಅಳವಡಿಸಲಾಗಿದೆ. ಇದರಿಂದ ಸರ್ಕಾರದ ವೆಚ್ಚ ಕಡಿಮೆಯಾಗಿರುತ್ತದೆ.

ಸಮುದ್ರ ಪ್ರದೇಶಕ್ಕೆ ಶಾಶ್ವತ ತಡೆಗೋಡೆ ನಿರ್ಮಾಣ

604(1122) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬ್ರಹ್ಮಾವರ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸಮುದ್ರ ಕರಾವಳಿ ಪ್ರದೇಶದ ವಿಸ್ತೀರ್ಣ ಎಷ್ಟು; ಇದರಲ್ಲಿ ಎಷ್ಟು ಕಿಲೋ ಮೀಟರ್ ಉದ್ದದ ಪ್ರದೇಶಕ್ಕೆ ಶಾಶ್ವತ ತಡೆಗೋಡೆ ನಿರ್ಮಿಸಲಾಗಿದೆ; ಎಷ್ಟು ಕಿಲೋ ಮೀಟರ್ ಪ್ರದೇಶಕ್ಕೆ ತಾತ್ಕಾಲಿಕ ತಡೆಗೋಡೆ ನಿರ್ಮಾಣವಾಗಿದೆ;

ಆ) ಬಾಕಿ ಉಳಿದಿರುವ ವಿಸ್ತೀರ್ಣಕ್ಕೆ ಯಾವಾಗ ತಡೆಗೋಡೆ ನಿರ್ಮಿಸಲಾಗುವುದು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರ ರಾಜ್ಯ ಸಚಿವರು)

ಅ) ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 13.38 ಕಿ.ಮೀ. ಉದ್ದದ ಕರಾವಳಿ ಪ್ರದೇಶ ಇದ್ದು, ಇದರಲ್ಲಿ 2.47 ಕಿ.ಮೀ. ಉದ್ದಕ್ಕೆ ಶಾಶ್ವತ ತಡೆಗೋಡೆ ನಿರ್ಮಿಸಲಾಗಿದೆ ಮತ್ತು 1.935 ಕಿ.ಮೀ. ಉದ್ದಕ್ಕೆ ಶಾಶ್ವತ ತಡೆಗೋಡೆ ಕಾಮಗಾರಿ ಪ್ರಗತಿಯಲ್ಲಿದೆ ಹಾಗೂ 1.08 ಕಿ.ಮೀ. ಉದ್ದಕ್ಕೆ ತಾತ್ಕಲಿಕ ತಡೆಗೋಡೆ ನಿರ್ಮಿಸಲಾಗಿದೆ.

ಆ) ಈ ಬಗ್ಗೆ ಒಂದು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದ್ದು ಕೇಂದ್ರ ಸರ್ಕಾರದ ಮಂಜೂರಾತಿ ದೊರೆತ ನಂತರ ಹಣದ ಲಭ್ಯತೆಯ ಆಧಾರದ ಮೇಲೆ ಅವಶ್ಯ ಕ್ರಮ ಕೈಗೊಳ್ಳಲಾಗುವುದು.

ಕಾರವಾರ ಬಂದರಿನಲ್ಲಿ ಕಂಟೈನರ್ ಹ್ಯಾಂಡ್ಲಿಂಗ್ ಕೆಲಸ ಕಾರ್ಯಗಳ ವಿವರ

605(1124) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ.(ಬ್ರಹ್ಮಾವರ) ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರವಾರ ಬಂದರಿನಲ್ಲಿ ಕಂಟೈನರ್ ಹ್ಯಾಂಡ್ಲಿಂಗ್ ಕೆಲಸ ಕಾರ್ಯಗಳನ್ನು ಪ್ರಾರಂಭಿಸಲಾಗಿದೆಯೇ; ಹಾಗಾದಲ್ಲಿ ಯಾವಾಗಿನಿಂದ ಪ್ರಾರಂಭಿಸಲಾಯಿತು; ಇಲ್ಲವಾದಲ್ಲಿ, ವಿಳಂಬಕ್ಕೆ ಕಾರಣಗಳೇನು?

ಆ) ಕಂಟೈನರ್ ಹ್ಯಾಂಡ್ಲಿಂಗ್ ಕೆಲಸ ಕಾರ್ಯಗಳನ್ನು ಯಾವಾಗಿನಿಂದ ಪ್ರಾರಂಭಿಸಲಾಗುವುದು ?